# ಲೀಮಾ

## ಪೆಸಿಫಿಕ್ ಸಾಗರ ತಟದ ಚೆಲುವೆ



ಪೆರು ದೇಶದ ರಾಜಧಾನಿ ಲೀಮಾ, ಪೆಸಿಫಿಕ್ ಸಾಗರದ ಅಂಚಿನಲ್ಲಿರುವ ನಗರ. ಅಟಕಾಮ ಮರುಭೂಮಿಗೂ ಸಮೀಪದಲ್ಲಿರುವ ಇದು, 'ಇಂಕಾ ನಾಗರಿಕತೆ' ಕಾಲದಲ್ಲಿ ಪುಟ್ಟ ನಗರವಾಗಿತ್ತು. ಪ್ರವಾಸಿಗರಿಗೆ ಮಾತ್ರವಲ್ಲ, ವಲಸಿಗರಿಗೂ ಇದು ಅಚ್ಚುಮೆಚ್ಚು ನಗರ.

■ ಡಿ.ಜಿ. ಮಲ್ಲಿಕಾರ್ಜುನ

ಭಾರತೀಯರಾದ ನಮಗೆ ಪೂರ್ವದಲ್ಲಿನ ಬಂಗಾಳಕೊಲ್ಲಿ ಮತ್ತು ಪಶ್ಚಿಮದಲ್ಲಿನ ಅರೇಬಿಯನ್ ಸಮುದ್ರದೊಂದಿಗೆ ಮಾತ್ರ ಸಂಪರ್ಕವಿದೆ. ಪೆಸಿಫಿಕ್ ಸಾಗರವನ್ನು ನೇರವಾಗಿ ನೋಡುವ ಅವಕಾಶವೇ ಇಲ್ಲ. ದಕ್ಷಿಣ ಅಮೆರಿಕದ ಪೆರು ದೇಶದ ರಾಜಧಾನಿ ಲೀಮಾ ನಗರಕ್ಕೆ ಹೋದೊಡನೆ ನಾವು ಮೊದಲು ನೋಡಿ ಆನಂದಿಸಿದ್ದು, ಪೆಸಿಫಿಕ್ ಸಾಗರದ ಸುಂದರ ದೃಶ್ಯವನ್ನು.

ಹೌದು. ಪಶ್ಚಿಮ ಕರಾವಳಿಯಲ್ಲಿ ಪೆಸಿಫಿಕ್ ಸಾಗರದ ಅಂಚಿನಲ್ಲಿದೆ ಲೀಮಾ ನಗರ. ಸಾಗರದ ಸಾಮೀಪ್ಯದಿಂದಾಗಿ ಈ ನಗರ ಕರಾವಳಿ ಸಂಸ್ಕೃತಿಗೆ ಮತ್ತು ಸೌಂದರ್ಯಕ್ಕೆ ಹೆಸರಾಗಿದೆ. ಪೆಸಿಫಿಕ್ ಸಾಗರವು ಇಲ್ಲಿ ತನ್ನ ಶಾಂತತೆ ಮತ್ತು ಕೆಲವೊಮ್ಮೆ ಭವ್ಯವಾದ ರೂಪದಲ್ಲಿ ಕಂಡುಬರುತ್ತದೆ.

ಪೆಸಿಫಿಕ್ ಸಾಗರ ಈಗ ನಮ್ಮಂತಹ ಪ್ರವಾಸಿಗರನ್ನು ಆಕರ್ಷಿಸಿದ ಹಾಗೆಯೇ 16ನೇ ಶತಮಾನದಲ್ಲಿ ಸ್ಪ್ಯಾನಿಷ್ ಸಾಹಸಿಗಳು ಮತ್ತು ವಸಾಹತುಗಾರರನ್ನು ಆಕರ್ಷಿಸಿತ್ತು. ಅವರ ಉದ್ದೇಶ ಹೊಸ ಭೂಮಿಗಳನ್ನು ಆಕ್ರಮಿಸಿ ಸಂಪತ್ತನ್ನು ಹೊತ್ತೊಯ್ಯುವುದಾಗಿತ್ತು. ಫ್ರಾನ್ಸಿಸ್ಕೊ ಪಿಸಾರೊ ಎಂಬ ಸ್ಪ್ಯಾನಿಷ್ ನಾವಿಕ 1532ರಲ್ಲಿ ಪೆಸಿಫಿಕ್ ಸಾಗರದ ಮೂಲಕ ಪೆರುವಿನ ಕರಾವಳಿಗೆ ಬಂದು, ಇಂಕಾ ಸಾಮ್ರಾಜ್ಯವನ್ನು ಗೆದ್ದನು. ಅವನು ತನ್ನ ಸೈನ್ಯದೊಂದಿಗೆ ಪೆಸಿಫಿಕ್ ಮಾರ್ಗವಾಗಿ ಪನಾಮಾದಿಂದ ದಕ್ಷಿಣಕ್ಕೆ ಪ್ರಯಾಣಿಸಿ, ಈಗಿನ ಲೀಮಾ ಸಮೀಪದ ಕರಾವಳಿ ಪ್ರದೇಶದಲ್ಲಿ ಇಳಿದನು.

ಪೆಸಿಫಿಕ್ ಸಾಗರವು ಈ ವಸಾಹತುಶಾಹಿಗಳಿಗೆ ಪ್ರಮುಖ ಮಾರ್ಗವಾಗಿತ್ತು. ಏಕೆಂದರೆ ಅವರು ಸ್ಪೇನ್‌ನಿಂದ ಅಟ್ಲಾಂಟಿಕ್ ಸಾಗರ ದಾಟಿ ಮೊದಲು ಕೆರೀಬಿಯನ್ ಪ್ರದೇಶಕ್ಕೆ ಬಂದು, ನಂತರ ಪೆಸಿಫಿಕ್ ಮೂಲಕ ದಕ್ಷಿಣ ಅಮೆರಿಕದ ಕರಾವಳಿಗೆ ಸಾಗಿದವರು. ಇಂಕಾ ಸಾಮ್ರಾಜ್ಯದ ಸಂಪತ್ತನ್ನು ಸಾಗಿಸುವುದೇ ಅವರ ಮುಖ್ಯ ಗುರಿಯಾಗಿತ್ತು. ಲೀಮಾದಂತಹ ಕರಾವಳಿ ನಗರಗಳನ್ನು ಸ್ಥಾಪಿಸುವ ಮೂಲಕ ಪೆರುವನ್ನು ಸ್ಪ್ಯಾನಿಷ್ ವಸಾಹತು ಆಡಳಿತದ ಕೇಂದ್ರವನ್ನಾಗಿ ಮಾಡಿದರು. ಈ ರೀತಿಯಾಗಿ, ಪೆಸಿಫಿಕ್ ಸಾಗರವು ಪೆರುವಿನ ವಸಾಹತೀಕರಣದಲ್ಲಿ ನಿರ್ಣಾಯಕ ಪಾತ್ರ ವಹಿಸಿತು.



ನೇರಳೆ ಬಣ್ಣದ ಜೋಳದಿಂದ ತಯಾರಾದ ಚೀಚಾ ಮೊರಾಡ ಪೇಯ

### ಸುವ್ಯವಸ್ಥಿತ ನಗರ

ಲೀಮಾ ನಗರವು ಭೌಗೋಳಿಕವಾಗಿ ವಿಶಿಷ್ಟ ಸ್ಥಳದಲ್ಲಿದೆ. ಇದು ಒಂದೆಡೆ ಅಟಕಾಮ ಮರುಭೂಮಿಯ ಸಮೀಪದಲ್ಲಿ, ಮತ್ತೊಂದೆಡೆ ಪೆರುವಿನ ಪಶ್ಚಿಮ ಕರಾವಳಿಯಲ್ಲಿ ಪೆಸಿಫಿಕ್ ಸಾಗರ ತೀರದ ಒಂದು ಭಾಗವಾಗಿದೆ. ಇದರ ಜೊತೆಯಲ್ಲಿ ಈ ನಗರ ರಿಮಾಕ್ ನದಿಯ ಕಣಿವೆಯಲ್ಲಿದೆ. ಈ ಮೂರೂ ಅಂಶಗಳು ಲೀಮಾದ ಸ್ಥಳ ಮತ್ತು ಗುಣಲಕ್ಷಣಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

ಇಂಕಾ ನಾಗರಿಕತೆಯ ಕಾಲದಲ್ಲಿ ಲೀಮಾ ಒಂದು ಪುಟ್ಟ ಊರಾಗಿತ್ತು. ಅವರ ರಾಜಧಾನಿ ಕುಸ್ಕೊ ನಗರವಾಗಿತ್ತು. ಆದರೆ ಸ್ಪ್ಯಾನಿಷ್ ವಸಾಹತುಶಾಹಿಗಳು ತಮ್ಮ ಅನುಕೂಲಕ್ಕಾಗಿ ವ್ಯವಸ್ಥಿತವಾಗಿ, ಲೀಮಾ ನಗರವನ್ನು ಕಟ್ಟಿದರು. ಮುಂದೆ ಕಡಲ್ಗಳ್ಳರ ಹಾವಳಿ, ಭೂಕಂಪ, ಸ್ಪೇನಿನ ಆಂತರಿಕ ಬೆಳವಣಿಗೆಗಳು, ಸ್ಯಾನ್ ಮಾರ್ಟಿನ್ ನೇತೃತ್ವದ ಸ್ವಾತಂತ್ರ್ಯ ಹೋರಾಟ, ಪೆಸಿಫಿಕ್ ಯುದ್ಧ, ಚಿಲಿಯನ್ನರಿಂದ ಲೂಟಿ, ದಾಳಿ,